




# ಗುಮ್ಮಟ ನಗರಿಯ ಚರ್ಚ್

ಚಿತ್ರ ಲೇಖನ:
**ಗುರುರಾಜ ಲಕ್ಷ್ಮಣ ಹಂದ್ರಾಳ**

ವಿಜಯಪುರದ ನಗರದ ಗಗನ್ ಮಹಲ್ ಹತ್ತಿರ ಇರುವ 400 ವರ್ಷಗಳಷ್ಟು ಪುರಾತನ ಚರ್ಚ್ ಇದು. ದೊರೆ ಆದಿಲ್ ಷಾ ಕಾಲದ ಕಟ್ಟಡ. ಬ್ರಿಟಿಷರ ಕಾಲದಲ್ಲಿ ಕಚೇರಿಯಾಗಿಯೂ ಚರ್ಚ್ ಆಗಿಯೂ ಬಳಕೆಯಲ್ಲಿತ್ತು. ಚರ್ಚ್‌ನ ಒಳಗಿರುವ ಅಲಂಕಾರ, ನಾನಾ ಹೂಬಳ್ಳಿಗಳ ವಿನ್ಯಾಸ ನೋಡುತ್ತಿದ್ದರೆ, ಇನ್ನೂ ನೋಡಬೇಕೆನಿಸುತ್ತದೆ. ಎಂತಹ ಬೇಸಿಗೆಯಲ್ಲೂ ಒಳಕ್ಕೆ ಪ್ರವೇಶಿಸಿದರೆ ಈ ಚರ್ಚ್ ತಂಪು ತಂಪು! ಬ್ರಿಟಿಷರ ಕಾಲದ ಪರ್ಶಿಯನ್ ಕಲಾಕೃತಿಗಳು, ಅಪರೂಪದ ಗ್ರ್ಯಾನೈಟ್‌ನಿಂದ ಮಾಡಿದ ಯೇಸು ಕಲಾಕೃತಿ ದೇಶವಿದೇಶೀಯರ ಗಮನ ಸೆಳೆಯುತ್ತದೆ.

ಹುಟ್ಟಿದ ಮಕ್ಕಳಿಗೆ ಈ ಸಿ.ಎಸ್.ಆಯ್. ಆಲ್ ಸೇಂಟ್ ಚರ್ಚ್‌ನಲ್ಲಿ ನಾಮಕರಣ ಮಾಡಲಾಗುತ್ತದೆ. ಈ ಚರ್ಚೊಳಕ್ಕೆ ಬಾಪ್ಟಿಸಂ ಟ್ಯಾಂಕ್ ಇದೆ. ಮಕ್ಕಳು ಹುಟ್ಟದ 40 ದಿನದಗಳೊಳಗಾಗಿ ಚರ್ಚ್ ಕರೆ ತಂದರೆ ಚರ್ಚ್‌ನ ಫಾದರ್ ಟ್ಯಾಂಕನಲ್ಲಿರುವ ಹೋಲಿ ವಾಟರ್‌ನಲ್ಲಿ ಕೈಹಾಕಿ ಮಗುವಿನ ತಲೆ ಮೇಲೆ ಕ್ರಾಸ್ ಚಿಹ್ನೆ ಹಾಕುವ ಮೂಲಕ ನಾಮಕರಣ ಮಾಡುತ್ತಾರೆ.

ಬಿಸಿಲೂರಾದ ವಿಜಯಪುರಕ್ಕೆ ದೂರದ ತಣ್ಣನೆಯ ಊರಾದ ಸ್ವಿಝರ್ಲಂಡಿನಿಂದ ಆಗಮಿಸಿದ ಬಾಸೆಲ್ ಮಿಶನ್ ಮಿಶನರಿಗಳು ಸುಮಾರು 130 ವರ್ಷಗಳ ಹಿಂದೆ ಈ ಚರ್ಚ್ ಅನ್ನು ಸ್ಥಾಪಿಸಿದರು. 1885ರ ಮಾರ್ಚಿ 15ರಂದು ರೆವರೆಂಡ್ ಸಿ.ಡಿ. ವುರ್ತ ಅವರು ಈ ಚರ್ಚ್ ಸ್ಥಾಪಿಸಲು ಪ್ರೇರಣೆ ನೀಡಿದರು ಎನ್ನುವುದು ಇತಿಹಾಸದ ಮಾಹಿತಿ. ಬೆತ್ಲೆಹೆಮ್ ಸಿಎಸ್ಐ ಆರಾಧನಾಲಯ ತನ್ನ ಐತಿಹಾಸಿಕ ಹಿನ್ನೆಲೆಯಿಂದಲೂ ನೂರಾರು ಜನರನ್ನು ಆಕರ್ಷಿಸುತ್ತಿದೆ.

ಇಲ್ಲಿ ಪ್ರತಿ ಭಾನುವಾರ ಹಾಗೂ ವಿಶೇಷ ದಿನಗಳಲ್ಲಿ ಧಾರ್ಮಿಕ ಕೂಟಗಳು, ಪ್ರಾರ್ಥನಾ ಸಭೆಗಳು ನಡೆಯುವುದಲ್ಲದೆ, ಮಕ್ಕಳಿಗಾಗಿ ಭಾನುವಾರ ಪಾಠ ಶಾಲೆ, ಹೆಣ್ಣು ಮಕ್ಕಳಿಗಾಗಿ ಕೂಟಗಳು, ಮದುವೆ, ನಾಮಕರಣ ಮುಂತಾದ ಸಮಾರಂಭಗಳೂ ನಡೆಯುತ್ತವೆ. ಕ್ರಿಸ್ತನ ಸುವಾರ್ತೆಗಳನ್ನು ಪ್ರಚಾರ ಮಾಡುವುದಲ್ಲದೆ, ಕನ್ನಡ ಮಾಧ್ಯಮ ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನೂ ಆರಂಭಿಸಲಾಗಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವ ಸಾಧ್ಯತೆಯೇ ಇಲ್ಲ ಎನ್ನುವ ಅಂದಿನ ಕಾಲದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಮಿಶನರಿಗಳು ಪ್ರತ್ಯೇಕವಾದ ಶಾಲೆಗಳನ್ನು ಪ್ರಾರಂಭಿಸಿದವು. ಯೇಸುಕ್ರಿಸ್ತನ ಜೀವನ ಸಂದೇಶದಂತೆ ರೋಗಿಗಳಿಗೆ ನೆರವಾಗಲು ವೈದ್ಯಕೀಯ ಸೇವೆಯನ್ನೂ ಒದಗಿಸಿದವು.

ವಿಜಯಪುರಕ್ಕೆ ಬಂದಾಗ ಬೇರೆಲ್ಲ ಐತಿಹಾಸಿಕ ಸ್ಥಳಗಳ ಜತೆಗೆ ಈ ಪುಟ್ಟ ಸುಂದರ ಚರ್ಚ್‌ಗೂ ಭೇಟಿ ನೀಡಬಹುದು.